‘ಲೇ ಗುರುನಾಥ ಏನಯ್ಯಾ ನೀನು’ ಎಂದು ಗುಂಡಣ್ಣ ಅಂದಾಗ ತಲೆ ಎತ್ತಿ ನೋಡಿದ. ಅವನು ಚರಿಗೆ ಹಿಡಿದು ಬಹಿರ್ದೆಶೆಗೆ ಬಂದಿದ್ದಾಂತ ಕಾಣ್ತದೆ, ಜನಿವಾರವೂ ಒಂದು ಕಿವಿಯ ಮೇಲೆ ಬೇರೆ ಕೂತಿತ್ತಲ್ಲಾ..! ಅದನ್ನು ನೋಡುತ್ತಿದ್ದಂತೆ ಈಗಷ್ಟೇ ಕೆಲವು ಕ್ಷಣಗಳ ಕೆಳಗೆ ತನ್ನ ಜೇಬಿನಲ್ಲಿದ್ದ ಜನಿವಾರವನ್ನು ತೆಗೆದು ಕೆರೆಯ ನೀರಿನಲ್ಲಿ ಬಿಟ್ಟು ಬಂದದ್ದು ಗುರುನಾಥನಿಗೆ ನೆನಪಿಗೆ ಬಂದಿತು. ಅದನ್ನು ಬಿಡುವಾಗಲೇ ‘ಇದರ ಅಗತ್ಯ ನನಗೇನು ಉಳಿದಿದೆ?’ ಎಂದುಕೊಂಡೇ ಬಿಟ್ಟಿದ್ದ. ಅಪ್ಪ ಅನಂತನಾರಾಯಣ ಹಾಗೆ ತೆಗೆದು ಹಾಕಿದ ಹದಿನೈದು ವರ್ಷದ ಮೇಲೆ ಗುರುನಾಥ ತೆಗೆದುಹಾಕಿದ್ದ. ಆ ದಿವಸಗಳನ್ನು ಬೆರಳ ತುದಿಯಲ್ಲೇ ಎಣಿಸಿದ. ಮಧ್ಯಾಹ್ನದಿಂದ ವಠಾರದೋರೆಲ್ಲ ‘ನಿನ್ನ ಶ್ರಾದ್ಧ ಮಾಡ್ಬೇಕೂಂತ ಮಾತಾಡ್ಕೆಂತ ನಿಮ್ಮ ಮನೆ ಎದ್ರೂ ನಿಂತಿದ್ರಯ್ಯ. ನಾನೂ ಅಲ್ಲಿದ್ದೆ. ಅವಸರವಾಯ್ತೇ. ಈ ಕಡೆ ಬಂದೆ. ಹಿಂಗೆ ಮಾಡಬಹುದೇನಯ್ಯಾ?’ ಎಂದರು ಗುಂಡಣ್ಣ. ಗುರುನಾಥನಿಗೆ ಆಶ್ಚರ್ಯವಾದದ್ದು ಈ ಸುದ್ದಿ ಇಷ್ಟು ಬೇಗ ಇಲ್ಲಿಗೆ ಹೇಗೆ ಬಂತೂಂತ. ‘ಏನಾಯ್ತು?’ ಎಂದು ಗುರುನಾಥ ಏನೂ ಆಗದವನ ಥರ ಗುಂಡಣ್ಣನನ್ನು ಕೇಳಿದ. ‘ಅಲ್ಲಯ್ಯಾ, ಜನಿವಾರವ ತೆಗ್ದು ಜೇಬಲ್ಲಿ ಇಟ್ಟುಕೊಂಡು, ಆ ಕೆಳಜಾತಿಯೋರ ಮನೆಯಲ್ಲಿ ಉಂಡೆಯಂತಲ್ಲಯ್ಯಾ? ಸದಯ್ಯನ ಕಡೆ ಹುಡುಗನೊಬ್ಬ ಆಗಲೇ ಬಂದು ಶಂಕರನಾರಾಯಣರಿಗೆ ಹೇಳಿ ಹೋದ್ನಂತೆ ಇದು ನಿಜವೇನೋ? ನಿಮ್ಮ ಅಪ್ಪ ಯಾರ್ಯಾರ್ದೊ ಮಾತು ಕೇಳ್ತಾ ನಿಂತ್ರೆ ಹೆಂಗೆ ಶಂಕ್ರ? ಬರ್ಲಿ ಗುರುನಾಥಾಂತ ನಿನ್ಗೆ ಕಾದಿದ್ದಾರಯ್ಯ’ ಎಂದೆನ್ನುತ್ತಾ ಗುಂಡಣ್ಣ, ‘ನಿಜವೇನೋ?’ ಎಂದು ಕೇಳುತ್ತಾ ಗುರುನಾಥನ ಬೆನ್ನ ಮೇಲೆ ಕೈಯಾಡಿಸಿ ಜನಿವಾರ ತಾಗದ್ದರಿಂದ, ‘ಅಯ್ಯೊ ನಿನ್ನ ಮನೆಕಾಯ್ವಾಗ..! ಇರ್ಲಿ ಜೇಬ್ನಲ್ಲಿದ್ರೆ ತಗದು ಹಾಕ್ಯಾಳೋ ಏನಾರ ಒಂದು ಹೇಳಾನ’ ಎಂದು ಆತಂಕದಲ್ಲೇ ಅಂದ ಗುಂಡಣ್ಣ. ‘ಇಲ್ಲ, ಅದ್ನ ಕೆರೆ ನೀರಾಗೆ ಬಿಟ್ಟು ಬಂದೆ’ ಎಂದು ನಿರ್ಲಿಪ್ತನಾಗಿಯೇ ಗುರುನಾಥ ಹೇಳಿದ ಮೇಲೆ ಗುಂಡಣ್ಣ ತಲೆಮೇಲೆ ಕೈಹೊತ್ತು, ದಾರಿ ನಡುವೆಯೇ ಕೂತುಬಿಟ್ಟ.

ಉಪನಯನ ಆದ ಮೇಲೆ ಗುರುನಾಥ ಆಗಾಗ ಹೊಸ ಜನಿವಾರ ಹಾಕಿಕೊಳ್ಳುವ ಸಂದರ್ಭ ಬಂದಾಗ ಮಾತ್ರ ತೆಗೆದದ್ದನ್ನು ಬಿಟ್ಟರೆ, ಈಗಲೇ ಅದನ್ನು ಸಂಪೂರ್ಣ ವರ್ಜ್ಯ ಮಾಡಿದ್ದು. ಅವನ ಬದುಕಲ್ಲೇನೂ ಅಂತಾ ಬಿರುಗಾಳಿ ಎಬ್ಬಿಸುವ ಬದಲಾವಣೆಯ ಸಂಗ್ತಿಗಳೇನೂ ಎಡತಾಕಿರಲಿಲ್ಲ. ಅದರೆ, ಅವನ ಅಂತರಾತ್ಮಕ್ಕೆ ಇಂದು ಏನು ಬೋಧವಾಯ್ತೋ ಯಾರಿಗೆ ಗೊತ್ತು? ‘ಇಲ್ಲೇ ಬೇಲಿ ಸಾಲಲ್ಲಿ ನಿಂತಿರೋ, ಮನೆಗೋಗಿ ಒಂದು ಹಳೆಯ ಜನಿವಾರ ತಂದ್ಬುಡ್ತೀನಿ. ನನ್ನ ಕಣ್ಣ ಮುಂದೆ ಬೆಳ್ದ ಹುಡುಗ ಪಾಖಂಡಿಯಾಗಬಾರದೋ?’ ಎಂದು ಗುಂಡಣ್ಣ ಓಡಲು ತೊಡಗಿದರು. ಆದರೆ, ಗುರುನಾಥ ಅವರ ಕೈ ಹಿಡಿದು ‘ಅದೇನೂ ಬ್ಯಾಡ. ನಾನೇ ಬ್ಯಾಡಾಂತ ತೆಗ್ದ ಮ್ಯಾಲೆ ಯಾರ್ನಾರ ಯಾಕೆ ಮೆಚ್ಚಿಸಲಿ? ಅಪ್ಪ ತೆಗದು ಈಸು ವರ್ಷ ನಿರಾಯಾಸವಾಗಿಲ್ಲೇ?’ ಎಂದ. ‘ಆದರೆ, ಅವನ್ನ ಯಾವನಾದ್ರೂ ಒಂದು ತಿಥಿ, ಶ್ರಾದ್ಧ, ವಾರಕ್ಕೆ ಕರ್ದಿದ್ದಾರೇನೋ? ಎಷ್ಟು ಜನ ನಿಮ್ಮನೆಗೆ ಬರೋದ್ನೆ ಬಿಟ್ಟೇಲ್ಲೇನೋ? ಏನೋ ನಿನ್ನನ್ನು ನೋಡಿ ಸಮಾಧಾನ ತಂದ್ಕಂಡಿದ್ರು. ಈಗ ನೀನೂ ಹಿಂಗೆ ಆದ್ರೆ ನಾಳೆ ಅಪರಕರ್ಮಗಳಿಗೆ ಯಾರಯ್ಯಾ ನಿಮ್ಮನೆಗೆ ಬರ್ತಾರೆ? ನನ್ನ ಮಾತು ಕೇಳೋ’ ಎಂದು ಕೈ ಹಿಡಿದು ಗುಂಡಣ್ಣ ಪರಿಪರಿಯಾಗಿ ಬೇಡಿಕೊಂಡ. ಆಮೇಲೆ ಸರ್ಪ ತುಳಿದವನಂತೆ ‘ನಿನ್ನನ್ನು ಮುಟ್ಟಿಬಿಟ್ಟೆನಲ್ಲಯ್ಯಾ ಯಾರ್ಗೂ ಹೇಳಬ್ಯಾಡೋ’ ಎಂದು ಆರ್ತಧ್ವನಿಯಲ್ಲಿ ಪ್ರಾರ್ಥಿಸಿತು ಮುದಿಜೀವ. ‘ಆಯ್ತು ನಡೀರಿ’ ಎಂದು ಗುಂಡಣ್ಣನನ್ನು ಮುಂದೆ ಬಿಟ್ಟು ಗುರುನಾಥ ನಿಧಾನಕ್ಕೆ ಕಣದ ಸಾಲಿನ ಕಾಲುರಸ್ತೆಯಿಂದ ಮನೆಯ ಕಡೆ ನಡೆದ. ಗುಂಡಣ್ಣ ಹೇಳಿದಂತೆ ಜಾತ್ಯಸ್ಥರೇನು? ಊರ ಹತ್ತು ಹಲವು ಮಂದಿ ಸೇರಿದ್ದರು. ಅಪ್ಪ ತಾನು ಕುಳಿತ ಜಾಗದಲ್ಲೇ ಕುಳಿತಿರುವುದೂ, ಚಿಂತೆಯಿಲ್ಲದೆ ನಿರುಮ್ಮಳನಾಗಿರುವುದನ್ನು ನೋಡಿ ಅವನಿಗೆ ಧೈರ್ಯ ಬಂದಿತು.

ಶಂಕರನಾರಾಯಣ, ಆಶ್ವತ್ಥನಾರಾಯಣ, ರಾಘಣ್ಣ ಇನ್ನೂ ಜಾತಸ್ಥ ಹಿರಿಕಿರಿಯರೆಲ್ಲರನ್ನೂ ನೋಡಿದ ಗುರುನಾಥ ಏನೂ ಗೊತ್ತಿಲ್ಲವೇನೋ ಎಂಬಂತೆ ‘ಏನು ಎಲ್ರೂ ಇಲ್ಲಿ ಸೇರ್ಬಿಟ್ಟಿದ್ದೀರಿ?’ ಎಂದ. ‘ಗುರುನಾಥರಾಯರು ಮಹಾಘನಂದಾರಿ ಕೆಲ್ಸ ಮಾಡಿಕೊಂಡು ಬಂದಿದಾರಲ್ಲಾ. ಅವ್ರನ್ನ ಸ್ವಾಗತಿಸೋಣ ಅಂತ ನಿಂತಿದ್ದೀವಿ’ ಎಂದ ಕೇಶವರಾಯ. ‘ಏನು.., ಅಂಥಾದ್ದೇನೂ ಆಗಿಲ್ಲಲಾ..!’ ಎಂದ ಗುರುನಾಥ. ‘ಬ್ರಾಹ್ಮಣ್ಯ ಬಿಡೋದು ಘನಂದಾರಿ ಕೆಲಸವಲ್ಲೇನಪ್ಪಾ..? ಜನಿವಾರ ಕಳಚಿ ಹಾಕೋದು ಘನಂದಾರಿ ಕೆಲ್ಸವಲ್ಲೇನಯ್ಯಾ? ಆ ಪಂಚಮರ ಮನೇಲಿ ಭಕ್ಷ್ಯಭೋಜ್ಯ ಉಂಡು ಬಂದಿದ್ದೀಯಲ್ಲಾ ಅದು’, ದಿಕ್ಕುದಿಕ್ಕಿನಿಂದ ಒಂದೊಂದು ಪ್ರಶ್ನೆ ಬಾಣದಂತೆ. ಕಟ್ಟೆಯ ಮೇಲೆ ಕಾಲಿಳಿಬಿಟ್ಟಿದ್ದ ಅಪ್ಪನನ್ನು ನೋಡಿದ ಗುರುನಾಥ. ನಿರ್ವಿಷಣ್ಣಭಾವದಲ್ಲೇ ಆತ ಕುಂತಿದ್ದ. ಆಮೇಲೆ ‘ಏನೋ, ಅವ್ರೆಲ್ಲಾ ಹೇಳೋದು ನಿಜಾನೇನೋ..? ’ಎಂದು ಕೇಳಿದ. ಗುರುನಾಥ ಸುಮ್ಮನೆ ನಿಂತಿದ್ದ. ‘ಆ ಪಂಚಾಚಾರದವ್ರು ಬಂದು ನಮ್ಗೆ ನಿನ್ನ ಯೋಗ್ಯತೆ ಹೇಳ್ಬೇಕಾತು. ಅವ್ರಿಂದ ನಾವು ಕೇಳಿಸ್ಕೋಬೇಕಾತು. ನಾವೂ ಅಂದ್ರೆ ಬಾಲ ಮುದ್ರಿಕೊಂಡಿದ್ದ ಅವ್ರು ಈಗ ಮೀಸೆ ತಿರುವುತ್ತಾ ಇದ್ದಾರೆ’ ಎಂದ ಶಂಕರನಾರಾಯಣ. ‘ಒದ್ದು ಹೊರಗಾಕ್ರಿ ಅವನನ್ನ, ಇಲ್ಲಾಂದ್ರೆ ನಿಮ್ಮನ್ನೆ ಕೆಡುಸ್ತಾನೆ ಎಂದ್ರಲ್ಲಯ್ಯಾ ನಿನ್ಗೆ ಯಾಕೆ ಬೇಕಿತ್ತೋ ದೊಡ್ಡಸ್ತಿಕೆ’ ಎಂದು ಲೇವಡಿ ಮಾಡುತ್ತಾ, ಕಿಡಿಕಿಡಿಯಾಡುತ್ತಾ ಕೇಶವರಾಯ ತಲೆಯ ಮೇಲೆ ಕೈಹೊತ್ತು ಕುಳಿತ. ‘ಯಾರೂ ಮಾಡದ್ನ ನಾನು ಮಾಡಿದ್ನಾ? ನಾಯಿಮಾಂಸ ತಿಂದವ್ರನ್ನ ಪೂಜ್ಯರೂಂತ ಅಂತೀರಿ, ನಾನೇನೂ ಅಂತ ಮಾಡಬಾರ್ದನ್ನ ಮಾಡಿದ್ನಾ?’ ಎಂದ ಗುರುನಾಥ. ‘ಪುರಾಣ ಪುಣ್ಯಪುರುಷರಿಗೆ ನಿನ್ನ ಹೋಲಿಸ್ಕೋ ಬ್ಯಾಡೋ ಏನೋ ಗೊತ್ತಿಲ್ದೆ ಆವೇಶ್ದಲ್ಲಿ ಮಾಡಿದ್ದೀಯ ಶುದ್ಧೀಕರಣ ಮಾಡಿಕೊಂಡು ಪಶ್ಚಾತ್ತಾಪ ಪಡು ಸಾಕು’ ಎಂದರು ರಾಘಣ್ಣ. ‘ಇಲ್ಲಾಂದ್ರೆ..?’ ಎಂದ ಗುರುನಾಥ. ‘ನೀನು ನಮ್ಮ ಪಾಲಿಗೆ ಸತ್ತೆ ಕಣಯ್ಯ, ಶ್ರಾದ್ಧಮಾಡಿ ಪೀಡೆ ತೊಲಗುತೂಂತ ಅಂದ್ಕಂತೀವಿ’ ಎಂದ ಕೇಶವರಾಯ. ‘ಅಷ್ಟೇ ತಾನೆ...? ಮಾಡ್ಕಾಹೋಗ್ರಿ’ ಎಂದ ಗುರುನಾಥ ಖಚಿತ ನಿರ್ಧಾರದಲ್ಲಿ.

ಈ ಮಾತು ಮುಗಿವ ಹೊತ್ತಿಗೆ ಗುರುನಾಥನ ಸೊಂಟಮುರಿದ ತಾಯಿ ರೂಮಿನಿಂದ ತೆವಳಿಕೊಳ್ಳುತ್ತಾ, ಕುಲಸ್ಥರ ಮಾತು ಕೇಳುತ್ತಾ ಬಂದಿತ್ತಲ್ಲಾ ‘ನೀವು ಅವ್ನ ಶ್ರಾದ್ಧಾ ಮಾಡೋಕೆ ನೀವೇನು ಅವನ ಅಪ್ನೆ, ಅಮ್ನೆ? ನಾವಿನ್ನೂ ಇದ್ದೀವಲ್ಲ. ನಾವು ನೋಡ್ಕೆಂತಿವಿ. ಶಂಕ್ರಣ್ಣ ಒಂದು ಮಾತು ಕೇಳ್ತೀನಿ, ನಿನ್ನ ಮಗ ಯಾವಳ್ನೋ ಕಟ್ಟಿಗೊಂಡು ಓಡಿಹೋದಾಗ, ಅವಳ್ಯಾವಳೋ ಅದೇ ಪಂಚಮರ ಹುಡ್ಗನ ಜೊತೆಗೆ ಓಡಿ ಹೋದಾಗ ನಾವೇನಾರ ನಿಮ್ಮನೆ ಹತ್ರ ಬಂದು ಶ್ರಾದ್ಧಾ ಮಾಡ್ತೀವಿ ಅಂತ ಅಂದ್ವಾ? ಅದ್ರ ಬದ್ಲು, ಹೊಸಕಾಲದ ಹುಡುಗ್ರು ಏನೋ ಮಾಡ್ಕೆಂತಾವೆ ಬಿಟ್ಟು ಬಿಡ್ರಿ ಅವ್ರ ಪಾಡಿಗೇಂತ ಅನ್ಲಿಲ್ಲೇ. ನಿನ್ನ ಹೆಂಡ್ತಿನಾ ಕೇಳೋ, ಎಷ್ಟು ದಿನ ನಮ್ಮನೆಯಿಂದ ನಿಮ್ಮನೆಗೆ ಕೂಳು ಕಳ್ಸಿದೀವೀಂತ?. ಅವ್ರು ಸುಖಾವಾಗಿದ್ರೆ ಸಾಕು ಅಂತ ನೀನೇ ಅಂದಾವ, ಈಗ ನನ್ನ ಮಗನ್ನ ಹದ್ದು ಬಸ್ತಿನಲ್ಲಿಡೋಕೆ ಬಂದಿದೀಯಾ. ಇದು ಯಾವ ನ್ಯಾಯಾನೋ?. ಅಲ್ಲಿ ಅವ್ನಿಗೆ ಆ ಕ್ಷಣಕ್ಕೆ ಏನನ್ನಿಸ್ತೋ ಉಂಡು ಬಂದಿದ್ದಾನೆ. ಸಮಾಧಾನವಾಗಿ ವಿಚಾರಿಸೋಣ ಅನ್ನೋ ಗ್ಯಾನ ಬ್ಯಾಡ್ವೆ? ಊರಿಗೆಲ್ಲ ಧರ್ಮೋಪದೇಶ ಮಾಡ್ತೀಯಾ? ಇದನ್ನೇ ಏನು ನಿನ್ನ ಧರ್ಮ ಹೇಳೋದು’ ಎಂದ ಆಕೆಯ ಮಾತಿಗೆ ಗುರುನಾಥ, ಸರಸ್ವತಿ, ಅನಂತನಾರಾಯಣ ಎಲ್ಲ ಬೆರಗಾಗಿ ಹೋದರು.

‘ಹೋಗೋ ಒಳಗೆ ಹೋಗಿ ಸ್ನಾನ ಮಾಡಿ ರಾಯರ ಮುಂದೆ ತಪ್ಪಾತೂಂತ ದಂಡ ಕಟ್ಟೋ’ ಎಂದ ಅಪ್ಪನ ಮಾತು ಕಿವಿಗೆ ಬೀಳುತ್ತಿದ್ದಂತೆ ಗುರುನಾಥ ದಢದಢನೆ ಮೆಟ್ಟಿಲೇರಿ ಒಳಕ್ಕೆ ಹೋಗಿ ಪಡಸಾಲೆಯ ತೂಗುಮಂಚದಲ್ಲಿ ಕೂತ. ಹೊರಗಡೆ ಅನಂತನಾರಾಯಣ ಎಲ್ಲರಿಗೂ ಸಮಜಾಯಿಷಿ ಹೇಳಿ ಕಳಿಸುತ್ತಿದ್ದರು. ‘ಆಯ್ತು, ತಪ್ಪು ಕಾಣಿಕೆ ಕಟ್ಟುಸ್ತೀನಿ’ ಎಂದು ಹಲವು ಬಾರಿ ಹೇಳಿದ್ದೂ ಗುರುನಾಥನಿಗೆ ಕೇಳಿಸಿತು.

ಹೊರಗಡೆ ಗದ್ದಲ ಕಡಿಮೆಯಾದಂತೆ ತೋರಿತು. ಅಮ್ಮ ತೆವಳಿಕೊಂಡೇ ಬಂದಳು. ಅಣ್ಣಾ ಅವಳ ಹಿಂದಿಂದೇನೇ ಬಂದು ‘ಯಾಕೋ... ಹಿಂಗ ಮಾಡಿದೆ?’ ಎಂದರು ಅನಂತನಾರಾಯಣ. ‘ಆ ಗುಂಡ್ರುಗೋವಿ ವಾಸಣ್ಣನ ಜೊತೆಗೆ ಇದ್ನಲ್ಲಾ

